ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್. ಮಾನ್ಯ ಅಧ್ಯಕ್ಷರೇ, ಕಾಡಾನೆಗಳನ್ನು ಅರಣ್ಯಕ್ಕೆ ಓಡಿಸಲಾಗುವುದು ಎಂದು ಹೇಳಿದ್ದಾರೆ. ಇದು ಸರಿಯಾಗಿ ಅರ್ಥವಾಗಿಲ್ಲ. ಕಾಡಾನೆಗಳನ್ನು ಅರಣ್ಯಕ್ಕೆ ಓಡಿಸುವುದೋ ಅಥವಾ ಇಲಾಖೆಯವರೇ ದಂತ ತೆಗೆದುಕೊಂಡು ಪಾಪವನ್ನು ಪಡೆದುಕೊಳ್ಳುತ್ತಾರೋ? ಈ ಕಾಡಾನೆಗಳು ಬಂದು ಬೆಳೆಗಳನ್ನು ಹಾಳು ಮಾಡುತ್ತಿವೆ. ಇದನ್ನು ಯಾವ ರೀತಿ ತಡೆಹಿಡಿಯಬೇಕು ಮತ್ತು ಬೆಳೆಗಳನ್ನು ಯಾವ ರೀತಿಯಿಂದ ಸಂರಕ್ಷಣೆ ಮಾಡಬೇಕೆಂದು ನಾನು ಕೇಳಿದ್ದು, ದಂತ ಕಿತ್ತುಕೊಳ್ಳುವವರು ಮೊದಲೇ ಕಿತ್ತುಕೊಳ್ಳುತ್ತಾರೆ. ಈ ಉತ್ತರ ಸರಿಹೋಗುವುದಿಲ್ಲ.

ಶ್ರೀ ಜಿ.ಎಸ್. ದೇಶಮುಖ್,—ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾವು ಬೆಂಗಳೂರು ಜಿಲ್ಲೆಯಲ್ಲಿ ೨೧ ಕಿಲೋಮೀಟರ್ ಉದ್ದದ ಮತ್ತು ಮೈಸೂರು ಜಿಲ್ಲೆಯಲ್ಲಿ ೧೭೭ ಕಿಲೋಮೀಟರ್ ಕಂದಕವನ್ನು ತೋಡಿದ್ದೇವೆ. ಆದರೆ ರೈತರು ಕೆಲವು ಕಡೆ ಇದನ್ನು ಮುಚ್ಚಿಬಿಡುವುದರಿಂದ ಆನೆಗಳು ಅಂತಹ ಕಡೆ ಬರುವುದು ಸಹಜವಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಆನೆಗೂ ಇರುಪೆಗೂ ಕೂಡ ಒಂದೇ ಉತ್ತರವಾಗಿದೆ.

ಶ್ರೀ ಜಿ.ಎಸ್. ದೇಶಮುಖ್.—ಸುಮಾರು ಐದುನೂರು ಜನರನ್ನು ಆನೆಪತ್ತೆ ತಡೆ ವೀಕ್ಷಕರನ್ನಾಗಿ ಕ್ರಮಬದ್ಧವಾಗಿ ನೇಮಿಸಲಾಗಿದೆ. ಅವರು ಡ್ರಮ್‌ಗಳನ್ನು ಉಪಯೋಗಿಸಿ ಆನೆಗಳನ್ನು ಓಡಿಸುತ್ತಾರೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಈಗ ಆನೆಗಳ ಸಂಖ್ಯೆ ಕಡಿಮೆಯಾಗುತ್ತಿದೆ. ದಂತ ಸಿಗುತ್ತದೆ ಎಂದು ಕಾಡಾನೆಗಳನ್ನು ಕೊಲ್ಲುತ್ತಾರೆ ಆದ್ದರಿಂದ ಇವುಗಳನ್ನು ಸಂರಕ್ಷಿಸಿ ಅರಣ್ಯಗಳಿಗೆ ಆನೆಗಳನ್ನು ಕಳಿಸುವ ವ್ಯವಸ್ಥೆ ಮಾಡಬೇಕು.

ಚಿಕ್ಕಮಗಳೂರು ವಿಭಾಗದಲ್ಲಿ ಅರಣ್ಯ ಸಂಚಾರಿ ದಳ

೯೦ (೨೯೬) ಶ್ರೀ ಐ.ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಚಿಕ್ಕಮಗಳೂರು ವಿಭಾಗದ ಅರಣ್ಯ ಇಲಾಖೆಯಲ್ಲಿರುವ ಅರಣ್ಯ ಸಂಚಾರಿ ದಳವು ದಕ್ಷತೆಯಿಂದ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಆ) ಕಳೆದ ೨-೩ ವರ್ಷಗಳಿಂದ ಎಷ್ಟು ಮಂದಿ ಕಳ್ಳಸಾಗಾಣಿಕೆದಾರರನ್ನು ಹಿಡಿಯಲಾಗಿದೆ?

ಇ) ಸಂಚಾರಿ ದಳಕ್ಕೆ ನೀಡಿರುವ ವಾಹನಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದೇ ?

ಶ್ರೀ ಜಿ.ಎಸ್. ದೇಶಮುಖ್ (ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು).—

ಅ) ಹೌದು.

ಆ) ೧೯೮೪-೮೫, ೧೯೮೫-೮೬ ಹಾಗೂ ೧೯೮೬-೮೭ (ಸೆಪ್ಟೆಂಬರ್ ಅಂತ್ಯದವರೆಗೆ) ೬೨ ಗಂಧದ ಕಳ್ಳಸಾಗಾಣಿಕೆಯಲ್ಲಿ ನಿರತರಾದ ೧೬೦ ಮಂದಿಯನ್ನು ಬಂಧಿಸಲಾಗಿದೆ.

ಇ) ಸದ್ಯದಲ್ಲಿ ಈ ರೀತಿ ಬೇಡಿಕೆ ಇಲ್ಲ.

ಶ್ರೀ ಐ.ಬಿ. ಶಂಕರ್.—ಸನ್ಮಾನ್ಯ ಅಧ್ಯಕ್ಷರೇ, ಮೊದಲನೇ ಪ್ರಶ್ನೆಗೆ ''ಹೌದು'' ಎಂದು ಉತ್ತರ ಕೊಟ್ಟಿದ್ದಾರೆ. ಇದನ್ನು ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಇವತ್ತಿನವರೆಗೆ ಅಂತಹ ಉತ್ತಮವಾಗಿ ಕೆಲಸ ಮಾಡುವಂಥ ಸಿಬ್ಬಂದಿ ವರ್ಗದವರಿಗೆ ಏನು ಅವಾರ್ಡ್ ಕೊಡುತ್ತಿದ್ದರು, ಅದನ್ನು ಸರ್ಕಾರದವರು ಈಗ ನಿಲ್ಲಿಸಿದ್ದಾರೆ. ಆಮೇಲೆ ಸಂಚಾರಿ ದಳಕ್ಕೆ ನೀಡಿರುವ ವಾಹನಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದೇ ಎಂದು ಕೇಳಿರುವ ಪ್ರಶ್ನೆಗೆ, ಸದ್ಯದಲ್ಲಿ ಈ ರೀತಿ ಬೇಡಿಕೆ ಇಲ್ಲ ಎಂದು ಹೇಳಿದ್ದಾರೆ. ಸಂಚಾರಿ ದಳಕ್ಕೆ ಹೊಸ ಜೀಪ್ ಕೊಟ್ಟಿದ್ದರೆ, ಅದನ್ನು ಮೇಲಾಧಿಕಾರಿಗಳು ಉಪಯೋಗಿಸಿಕೊಂಡು, ಹಳೆಯ ಜೀಪನ್ನೇ ಸಂಚಾರಿ ದಳಕ್ಕೆ ಕೊಟ್ಟಿದ್ದಾರೆ. ಇದರ ಬಗ್ಗೆ ಸರ್ಕಾರ ವ್ಯವಸ್ಥೆ ಮಾಡಬೇಕು. ಆಮೇಲೆ ಈ ಅರಣ್ಯ ಇಲಾಖೆಯವರಿಗೆ ವೈರ್‌ಲೆಸ್ ಸೆಟ್ ಒದಗಿಸಿಕೊಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಎಸ್. ದೇಶಮುಖ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವಂತೆ ಅವಾರ್ಡ್ ಕೊಡುವ ಬಗ್ಗೆ ವಿಚಾರ ಮಾಡುತ್ತೇವೆ. ಇನ್ನು ವಾಹನಗಳನ್ನು ಬೇರೆ ಅಧಿಕಾರಿಗಳು ಉಪಯೋಗಿಸುತ್ತಿದ್ದಾರೆಂದು ಹೇಳಿದ್ದಾರೆ. ಇದರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇನೆ. ಈಗಾಗಲೇ ಒಳ ವೈರ್‌ಲೆಸ್ ಸೆಟ್‌ಗಳನ್ನು ಅಪರಿಗೆ ಒದಗಿಸಲಾಗಿದೆ, ಹಂತ ಹಂತವಾಗಿ ಇವುಗಳನ್ನು ಹೆಚ್ಚು ಮಾಡಲಾಗುವುದು.

ಶ್ರೀ ಐ.ಬಿ. ಶಂಕರ್.—ಮಲೆನಾಡಿಗೆ ಒಂದೂ ವೈರ್‌ಲೆಸ್ ಸೆಟ್ ಕೊಟ್ಟಿಲ್ಲ. ಆದ್ದರಿಂದ ಚಿಕ್ಕಮಗಳೂರಿಗೆ ಒಂದು ವೈರ್‌ಲೆಸ್ ಸೆಟ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಇದಿನಬ್ಬರವರೇ ನಿಮ್ಮ ಪ್ರಶ್ನೆಯನ್ನು ಒಂದು ಪಾರ ಮುಂದಕ್ಕೆ ಹಾಕಿದೆ.

ಜುಕ್ಕಿ ಪ್ರಶ್ನೆ ೯೨ (೩೩೧)

ಶ್ರೀ ಎಂ. ಎಸ್. ಪಾಟೀಲ್.—ನಾನು ಅಂಡರ್‌ಟೇಕಿಂಗ್ಸ್ ಬಗ್ಗೆ ಹೇಳಿದ್ದೇನೆ. ನನಗೆ ಈವರೆಗೂ ಉತ್ತರವೇ ಬಂದಿಲ್ಲ.

ಅಧ್ಯಕ್ಷರು.—ಉತ್ತರ ಕಳುಹಿಸಿಕೊಡುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಯಲ್ಲಿ ಎಲೆಕ್ಟ್ರಿಸಿಟಿಗೆ ಸಂಬಂಧಪಟ್ಟಂತೆ ಎರಡು ಪ್ರಶ್ನೆ ಇದೆ. ಆದರೆ ಮೂಲ ಪ್ರಶ್ನೆ ಲೇಬರ್ ಮಂತ್ರಿಗಳಿಗೆ ಹೋಗ ಬೇಕು. ನನ್ನ ಖಾತೆಗೆ ಸಂಬಂಧಪಟ್ಟ ಪ್ರಶ್ನೆಗಳಿಗೆ ಬೇಕಾದರೆ ಉತ್ತರ ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಮಲ್ಲಾರಿಗೌಡ ಎಸ್. ಪಾಟೀಲರೇ, ನಿಮಗೆ ಮುಂದಿನ ಪಾರ ಉತ್ತರ ಕಳುಹಿಸಿಕೊಡಲಾಗುವುದು. ಈಗ ಮುಂದಿನ ಪ್ರಶ್ನೆ ಭೂಪತಿಯವರೇ ಕೇಳಿ.

ರಾಜ್ಯದಲ್ಲಿ ಗ್ರಾಮಗಳ ವಿದ್ಯುದ್ದೀಕರಣ

೯೩. (೩೫೦(ಡಿ) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ೧೯೮೪, ೧೯೮೫ ಮತ್ತು ೧೯೮೬ನೇ ಸಾಲುಗಳಲ್ಲಿ ವಿದ್ಯುದ್ದೀಕರಣಗೊಳಿಸಿದ ಹಳ್ಳಿಗಳ ಸಂಖ್ಯೆಯೆಷ್ಟು? (ವರ್ಷವಾರು ವಿವರ ಕೊಡುವುದು)

ಆ) ಇನ್ನೂ ವಿದ್ಯುತ್ ಸೌಲಭ್ಯವನ್ನು ಹೊಂದದ ಹಳ್ಳಿಗಳ ಮತ್ತು ತಾಂಡಗಳ ಸಂಖ್ಯೆಯೆಷ್ಟು (ತಾಂಡಗಳು–ಹ್ಯಾಮೆಲೆಟ್ಸ್) ಅವುಗಳನ್ನು ಇನ್ನೆಷ್ಟು ವರ್ಷಗಳಲ್ಲಿ ವಿದ್ಯುದ್ದೀಕರಣಗೊಳಿಸಲಾಗುವುದು?

ಇ) ಪ್ರತಿ ಹಳ್ಳಿಗಳಲ್ಲೂ ಜನತಾ ಮನೆಗಳಿರುವ (ಕಾಲೋನಿಗಳಿಗೆ) ಮತ್ತು ಹರಿಜನ ಬಸ್ತಿಗಳಿಗೆ ವಿದ್ಯುಚ್ಛಕ್ತಿ ಒದಗಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆಯೇ? (ಯೋಜನೆಯ ವಿವರ ಗಳನ್ನು ಕೊಡುವುದು)

ಈ) ಸಂಡೂರು ಕ್ಷೇತ್ರದ ಯಾವ ಯಾವ ಹಳ್ಳಿಗಳಿಗೆ ಮತ್ತು ತಾಂಡಾಗಳಿಗೆ (ಹ್ಯಾಮೆಲೆಟ್ಸ್) ೮೪–೮೫ ಮತ್ತು ೮೫–೮೬ರಲ್ಲಿ ವಿದ್ಯುಚ್ಛಕ್ತಿ ಒದಗಿಸಲಾಗಿದೆ ಇನ್ನೂ ವಿದ್ಯುತ್ ಪೂರೈಕೆಯಾಗದೆ ಉಳಿದಿರುವ ಹಳ್ಳಿಗಳು ಮತ್ತು ತಾಂಡಗಳು ಯಾವುವು?

ಉ) ಪ್ರಸ್ತುತ ವರ್ಷ ಯಾವ ಯಾವ ಹಳ್ಳಿಗಳ ಹರಿಜನ ಬಸ್ತಿಗಳಿಗೆ ಮತ್ತು ಜನತಾ ಕಾಲೋನಿಗಳಿಗೆ ವಿದ್ಯುತ್ ಕಂಬಗಳ ವಿಸ್ತರಣೆ ಮಾಡಲಾಗುವುದು?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ೧೯೮೪–೮೫ರಲ್ಲಿ ೧೪೨೫ ಗ್ರಾಮಗಳು ೧೯೮೫–೮೬ರಲ್ಲಿ ೧೦೩೮ ಗ್ರಾಮಗಳು, ೧೯೮೬–೮೭ರಲ್ಲಿ ೫೬೩ ಗ್ರಾಮಗಳು (೩೧-೧೨-೮೬ರವರೆಗೆ)